ಆದರೆ ಹೀಗಾಗುತ್ತದೆ ಎಂಬ ಅಂದಾಜು ಅವರಿಗೂ ಇರಲಿಲ್ಲ. ಹಿಂದೆಲ್ಲ ಬಿದ್ದರೂ ದೊಡ್ಡ ಪಾರ್ಟಿ ಬೆನ್ನಲ್ಲಿರುತ್ತಿತ್ತು. ಹಳಹಳಿಸಲು ಒಂದಿಷ್ಟು ಜನ ಇರುತ್ತಿದ್ದರು. ಈಗ ಹಾಗಲ್ಲ, ಎಲ್ಲಾ ಬಿಟ್ಟು ಒಬ್ಬೊಂಟಿಯಾಗಿ, ಪಕ್ಷ ಪಂಗಡಗಳ ಪಗಡೆ ಕಟ್ಟದೆ ಅಭಿಮನ್ಯುವಿನ ಹೋರಾಟ! ಕಡೆಗೆ ಅವನಿಗಾದ ಹಾಗೇ ಆಯಿತು. ರುಂಡ ಮುಂಡ ಕೈ ಕಾಲು ಎಲ್ಲ ಒಂದೊಂದಾಗಿ ಕತ್ತರಿಸಿಕೊಂಡು ಸಬಂಧ ಮನೆಗೆ ಬಂದಿದ್ದು. ದುರಂತವೆಂದರೆ ಅಳಲೂ ಯಾರೂ ಇಲ್ಲದಿದ್ದದ್ದು.

ಕಷ್ಟ ಬಂದಪ್ಪಳಿಸಿದ ಮೇಲೆ ಪುನಃ ನೆಟ್ಟಗಾಗಬಹುದಿತ್ತು. ಮನೆ, ಅಲ್ಲಿನ ಬೆಳೆ ಬಗ್ಗೆ ಕೊಂಚ ನಿಗಾ ವಹಿಸಿ ಮುತುವರ್ಜಿಯಿಂದ ನಡೆದುಕೊಂಡಿದ್ದರೆ ಸಮಾಧಾನದಿಂದ ಬದುಕಲು ಯಾವ ಅಡ್ಡಿಯೂ ಇರಲಿಲ್ಲ. ಆದರೆ ಇಷ್ಟು ವರ್ಷ ತಿರುಗಿದ ಅಭ್ಯಾಸ, ಹಾಗೆ ತಪ್ಪನೆ ತಪ್ಪಿಸಿಕೊಳ್ಳಲು ಬರುತ್ತದೆಯೆ? ಏನೂ ಆಗದಿರುವ ಹಾಗೆ ಅಂಗಿ ಲುಂಗಿಗೆ ಇಸ್ತ್ರಿ ಹೊಡೆದು ಹೊರಟರು – ಟೆಂಪೊದವರಿಗೆ, ಮಾಯ್ಕದವರಿಗೆ, ಕೈಗಡ ಕೊಟ್ಟವರಿಗೆ ದುಡ್ಡು ಕೊಡಲು. ಆದ ಆಘಾತ ಮರೆಯಲು ಅಲ್ಪಸ್ವಲ್ಪ ಇದ್ದುದು ಬಾರು, ಇಸ್ಪೀಟಿನ ಪಾಲಾಯಿತು. ಅದರಲ್ಲೂ ಸೋಲು. ಅದನ್ನು ಪಡೆಯಲು ಆಟ ಕುಡಿದಾಟ. ಹೀಗೆ ಮಳ್ಳು ಬಿಟ್ಟ ಹೊರತು ಮದುವೆಯಾಗುವುದಿಲ್ಲ, ಮದುವೆಯಾದ ಹೊರತೂ ಮಳ್ಳು ಬಿಡುವುದಿಲ್ಲ ಎಂಬಂತಾಗಿತ್ತು!

ಕೊನೆಗೆ ಎಲ್ಲಿಗೆ ಬಂತಪ್ಪ ಎಂದರೆ, ಅಡಿಕೆ ತೆಂಗು ಇತ್ಯಾದಿ ಮಾರಿ ಬಂದ ಹಣವನ್ನೂ ಒಂದು ಪೈಸೆ ಬಿಡದೆ ಖಾಲಿ ಮಾಡುವುದು. ವೀಳ್ಯದ ಎಲೆಯ ಮಾರಾಟದಿಂದ ಬರುವ ದುಡ್ಡೆ ಪ್ರತಿ ಕೊಯ್ಲಿಗೆ ಸಾವಿರಾರು ರೂಪಾಯಿ ಆಗುತ್ತಿತ್ತು. ಕೊನೆಗೆ ಕೊಯ್ದವರಿಗೂ ಪಗಾರು ಕೊಡಲು ದುಡ್ಡಿರುತ್ತಿರಲಿಲ್ಲ.

ಅಡಿಕೆ ಸುಲಿಯಲು ಕೆಲಸದ ಹೆಂಗಸರು ಸಂಜೆಯಾಗುತ್ತಿದ್ದಂತೆ ಮೆಟಗತ್ತಿ ಹಿಡಿದು ಬರುತ್ತಿದ್ದರು. ಅವರು, ಮಧ್ಯರಾತ್ರಿಯವರೆಗೆ ಹರಟೆ ಹೊಡೆಯುತ್ತ, ಕವಳ ಹಾಕುತ್ತ, ಚಹ ಕುಡಿಯುತ್ತ ಅಡಿಕೆ ಸುಲಿಯುತ್ತಿದ್ದರು. ಸುಮಾರು ಹೊತ್ತು ಹೆಗಡೆಯವರ ಹೆಂಡತಿ ಕಮಲಮ್ಮನೂ ಅವರಿಗೆ ಕಂಪನಿ ಕೊಡುತ್ತಿದ್ದಳು. ಅವರಿಗೆ ಡಬ್ಬಿಗೆ ಇಂತಿಷ್ಟು ಎಂದು ಲೆಕ್ಕ. ಹಾಗೆ ನೋಡಿದರೆ ಅವರಿಗೆ ಸಿಗುವ ದುಡ್ಡು ಜುಜುಬಿ. ಆದರೂ ಅವರು ಆಸೆಯಿಂದ, ಹುರುಪಿನಿಂದ ಸುಲಿಯುವುದು ನೋಡಿದರೆ ಸಂಭ್ರಮ, ಆಶ್ಚರ್ಯವಾಗುತ್ತಿತ್ತು. ಮಧ್ಯರಾತ್ರಿ ಅವರೆಲ್ಲ ಹೋಗುವಾಗ, ಮನೆಯಾಳು ಎದ್ದು, ಒಬ್ಬೊಬ್ಬರದು ಎಷ್ಟು ಡಬ್ಬಿಯಾಯಿತು ಎಂದು ಲೆಕ್ಕ ಮಾಡುತ್ತಿದ್ದ. ಮುಟ್ಟೆಯಲ್ಲಿದ್ದ ಸುಲಿದ ಅಡಿಕೆ ತೆಗೆದು, ಡಬ ಡಬ್ ಡಬ್ ಆವಾಜಾಗುವ ಹಾಗೆ ತಗಡಿನ ಡಬ್ಬಿಗೆ ಸುರಿದು, ಗಣ್ಪೆ ನಾಲ್ಕು ಡಬ್ಬಿ, ಮಾಳು ನಾಲ್ಕು ಡಬ್ಬಿ, ಬಡಕನ ಮಗುದು ಆರು ಡಬ್ಬಿ... ಎಂದು ಪಟ್ಟಿಯಲ್ಲಿ ಬರೆದಿಡುವುದು. ಕೆಲ ದಿನಗಳಲ್ಲಿ ಅದನ್ನು ಸ್ವಚ್ಛ ಮಾಡಿ, ಚಾಲಿ ಯಾವುದು ಹಾಳು ಯಾವುದು ಎಂದು ಬೇರೆ ಮಾಡುವುದು. ನಂತರ ಗೋಣಿಚೀಲದಲ್ಲಿ ತುಂಬಿ, ಕಳಲೆ ಬಾಗಿಲಿಗೆ ಹೊತ್ತೊಯ್ದು ದೋಣಿಗೆ ಹಾಕಿ ಹೊನ್ನಾವರಕ್ಕೆ ಒಯ್ಯುವುದು. ಅಲ್ಲಿಂದ ವಾಹನದ ಮೇಲೆ ಕುಮಟೆಯ ವಕಾರಿಗೆ ಹಾಕುವುದು. ಸುಲಿದವರಿಗೆ ದುಡ್ಡು ಸಿಗುವುದು ಕುಮಟೆಯಲ್ಲಿ ಅಡಿಕೆ ಮಾರಿ ಬಂದಮೇಲೆಯೇ! ಅಡಿಕೆ ಒಯ್ದದ್ದು ಗೊತ್ತಾಗುತ್ತಿದ್ದಂತೆ, ಸುಲಿದ ಹೆಂಗಸರು ದುಡ್ಡು ಕೇಳಲು ಬರುತ್ತಿದ್ದರು. 'ಕೊಡ್ವನೆ, ಅಡಿಕಿ ತಕಂಡ ಹೋದವರು ಇನ್ನೂ ಬಂದಿಲ್ಲ' ಎಂದು ಕಮಲಮ್ಮ ಗಂಟಲಲ್ಲಿ ಅಡಿಕೆ ಹೋಳು ಸಿಕ್ಕಿಕೊಂಡವರಂತೆ ಹೇಳಿ ಕಳಿಸುತ್ತಿದ್ದಳು. ಎಲೆಗಿಲೆ ಕೊಯ್ದವರೂ 'ದುಡ್ ಬೇಕಾಗಿತ್ತು, ಮನಿಲಿ ಅಪೂಟ್ ಸಾಮಾನಿಲ್ಲ' ಎಂದು ಬರುತ್ತಿದ್ದರು. ಹೆಗಡೆಯವರು ಆಳು ಹೋಗಲಿ, ಮನೆಯಲ್ಲಿ